

# ಸಾಹಿತ್ಯ ಪರಿಚಾರಕ ಮಹಾಂತ!

ವಿಜಯಪುರ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ, ಸಾಕಷ್ಟು ಸಾಹಿತ್ಯಕೃಷಿ ಮಾಡಿದ ಅಪರೂಪದ ಸಾಧಕ ಮಹಾಂತ.

■ ಸುಭಾಸ ಯಾದವಾಡ

ಇಂಥವರು ಕೆಲವೇ ಕೆಲವು ಜನ ಇರುತ್ತಾರೆ. ಇವರಿಗೆ ಮಾಡಲು ಕೆಲಸವೊಂದಿದ್ದರೆ ಸಾಕು. ಹೆಸರು, ಕೀರ್ತಿ, ಅಧಿಕಾರ, ಹಣ... ಯಾವುದೂ ಬೇಡ. ಇವರು ಕೆಲಸವನ್ನು ಹುಡುಕಿಕೊಂಡು ಹೋಗುತ್ತಾರೆ. ಕಣ್ಣಲ್ಲಿ ಕಣ್ಣಿಟ್ಟು ಶ್ರದ್ಧೆಯಿಂದ ಮಾಡುತ್ತಾರೆ. ಕೊನೆಗೆ 'ನಾನು ಮಾಡಿದೆ' ಎಂಬುದನ್ನು ಮರೆತು ಸಂತರಂತೆ ಹೊರಟು ಬಿಡುತ್ತಾರೆ.

ಹಾಗಾದರೆ ವಿಜಯಪುರದ ಟ್ರೆಜರಿ ಕಾಲೊನಿಗೆ ಬನ್ನಿ. ಮಹಾಂತ ಗುಲಗಂಜಿ ಎಂಬ 92ರ ಸಾಹಿತ್ಯ ಸಂತನನ್ನು ಭೇಟಿಯಾಗಿ ಮಾತನಾಡಿಸಿ. ಅವರ ಮನೆಯನ್ನೊಮ್ಮೆ ನೋಡಿ. ಅಲ್ಲಿರುವ ಅಚ್ಚುಕಟ್ಟುತನ.. ಎಳೆಯ ಹುಡುಗನಂತೆ ಓಡಾಡುತ್ತಿರುವ ಗುಲಗಂಜಿಯವರ ಚುರುಕುತನ.. ಪ್ರತಿ ಕಾರ್ಯದಲ್ಲಿರುವ ಅವರ ಶ್ರದ್ಧೆ.. ಎಲ್ಲವನ್ನೂ ನೋಡಿದರೆ ಈ ಸಾಹಿತ್ಯ ಸಾಧಕನ ಬಗ್ಗೆ ನಿಮಗೇ ತಿಳಿಯುತ್ತದೆ.

ಇವರ ಹುಟ್ಟೂರು ಬಾಗಲಕೋಟೆ ಜಿಲ್ಲೆಯ ಶಿರೂರು. ಅದು ಅವರಿಗೆ ಸಿರಿಯೂರು. ಅಲ್ಲಿನ ಜನ, ಸಂತೆ, ಸಂಪ್ರದಾಯ, ಸೊಬಗು... ಎಲ್ಲವೂ ಅವರ ಬರಹಕ್ಕೆ ಪ್ರೇರಣೆ. ಅಲ್ಲಿಯೇ ಅವರ ಪ್ರಾಥಮಿಕ ಶಿಕ್ಷಣ ಪ್ರಾರಂಭವಾಗಿ ವಿಜಾಪುರ ಬಳಿಯ ಬಿಜ್ಜರಗಿಯಲ್ಲಿ ಮುಂದುವರೆಯಿತು. ಪ್ರೌಢ ಶಿಕ್ಷಣ ಹಾವೇರಿಯಲ್ಲಿ. ಉಚ್ಚ ಶಿಕ್ಷಣ ವಿಜಯಪುರದ ವಿಜಯ ಕಾಲೇಜಿನಲ್ಲಿ.

ಹೈಸ್ಕೂಲಿನಲ್ಲಿದ್ದಾಗಲೇ ಸಾಹಿತ್ಯಾಸಕ್ತಿಯ ಅಂಕುರ ಕುಡಿಯೊಡೆದದ್ದು. ಲಲಿತ ಪ್ರಬಂಧ, ಏಕಾಂಕ ನಾಟಕ, ಹನಿಗವನ, ಚುಟುಕು, ಪತ್ರ ಲೇಖನ, ಪ್ರವಾಸ ಕಥನ, ವ್ಯಕ್ತಿ ಚಿತ್ರಣ, ಕಥೆ, ಕಾದಂಬರಿ ಹೀಗೆ ಎಲ್ಲ ಪ್ರಕಾರಗಳಲ್ಲೂ ಕೃಷಿ. ಅವುಗಳಲ್ಲೆಲ್ಲ ಪ್ರಬಂಧ ಸಾಹಿತ್ಯ ಅವರಿಗೆ ತುಂಬ ಅಚ್ಚುಮೆಚ್ಚು. ಅವರ 'ನಡೆಯದ ನೋಟಿನ ಲೀಲಾ ವಿಲಾಸಕ್ಕೆ' ರಾಜ್ಯಮಟ್ಟದ ಸಾಹಿತ್ಯ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಬಂದಿತ್ತು. ಅದು ಮಹಾರಾಷ್ಟ್ರ ರಾಜ್ಯದ 9ನೇ ತರಗತಿಯ ಕನ್ನಡ ಪಠ್ಯ ಪುಸ್ತಕದಲ್ಲೂ ಸೇರಿಕೊಂಡಿತು. ಆಗಿನ ಜಯಕರ್ನಾಟಕ, ಪ್ರಜಾಮತ, ಅಂಕುಶ, ತರಂಗ (ಗದಗ), ಪ್ರಗತಿ, ಉಷಾ ಮೊದಲಾದ ಪತ್ರಿಕೆಗಳಲ್ಲಿ ಅವರ ಲೇಖನ, ಕವಿತೆ, ಕಥೆ, ಕಾದಂಬರಿಗಳು ಪ್ರಕಟವಾದವು. ವಚನ ಪಿತಾಮಹ ಫ.ಗು.ಹಳಕಟ್ಟಿಯವರ 'ನವಕರ್ನಾಟಕ' ವಾರ ಪತ್ರಿಕೆಯ ಸಹಾಯಕ ಸಂಪಾದಕರಾಗಿಯೂ ಗುಲಗಂಜಿಯವರು ಕೆಲಸ ಮಾಡಿದ್ದರು.

ಅವರು ವಿಜಾಪುರ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಏಕಮೇವ ವ್ಯಕ್ತಿ. ಹಾಗೆಯೇ ವಿಜಾಪುರ ಜಿಲ್ಲಾ 12ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆಯ ಗೌರವಕ್ಕೂ ಪಾತ್ರರಾದರು. ಆ ಸಂದರ್ಭದಲ್ಲಿ ಅವರ ವಿರುದ್ಧ ಒಂದು ಸಣ್ಣ ಅಪಸ್ವರ ಕೂಡ ಎಲ್ಲೂ ಕೇಳಲಿಲ್ಲ. ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಆರಂಭದಿಂದ ಇಂದಿನವರೆಗೆ, ಅದರ ಒಂದಿಲ್ಲೊಂದು ಚಟುವಟಿಕೆಗಳಲ್ಲಿ ಗುಲಗಂಜಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

ಅವರು ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ ಸೇವೆಯನ್ನು ಆರಂಭಿಸಿ, ಕರಣಿಕರಾಗಿ.. ಲೆಕ್ಕಿಗರಾಗಿ.. ಸೂಪರಿಂಟೆಂಡೆಂಟರಾಗಿ ಕೊನೆಗೆ ಗೆಜೆಟೆಡ್ ಅಸಿಸ್ಟೆಂಟ್ ಆಗಿ ಪದೋನ್ನತಿ ಹೊಂದಿ 1983ರಲ್ಲಿ ನಿವೃತ್ತರಾದರು. ಖ್ಯಾತ ಹಾಸ್ಯ ಸಾಹಿತಿ ಬೀಚಿ, ನಿರಂಜನ, ಎಂ.ರಾಮಮೂರ್ತಿ, ಬಸವರಾಜ ಕಟ್ಟಿಮನಿ ಮುಂತಾದವರು ತಮ್ಮ ಹಸ್ತಾಕ್ಷರದಲ್ಲಿ ಗುಲಗಂಜಿಯವರಿಗೆ ಬರೆದ ಪತ್ರಗಳ ಅಮೂಲ್ಯ ಸಂಗ್ರಹ ಅವರ ಬಳಿ ಇದೆ. ಅದನ್ನು ಅವರು ಜೋಪಾನವಾಗಿ ಕಾಯ್ದಿರಿಸಿದ್ದಾರೆ. ಗುಲಗಂಜಿಯವರ ಮನೆ, ಮನೆ ಎನಿಸುವುದೇ ಇಲ್ಲ. ಎಲ್ಲಿ ನೋಡಿದರೂ ಅಚ್ಚುಕಟ್ಟಾಗಿ ಜೋಡಿಸಿದ ಪುಸ್ತಕಗಳೇ! ಹೀಗಾಗಿ ಅದೊಂದು ಗ್ರಂಥಾಲಯವೋ... ವಾಚನಾಲಯವೋ ಎಂದು ಭಾಸವಾಗುತ್ತದೆ. ಈ ಸಾಹಿತ್ಯ ಸಂತನ ಸೇವೆ ನಿರಂತರವಾಗಿ ನೂರ್ಕಾಲ ಬಾಳಲಿ...! ■


ವಶೀಕರಣ ಸ್ಪೆಷಲಿಸ್ಟ್



ಶ್ರೀಯುತ ಮಂಜುನಾಥ ಗುರೂಜಿಯವರಿಂದ

ಇಲ್ಲಿದೆ ದೇವಿ ಅಘೋರಿ ಶಕ್ತಿಗಳ ಭಂಡಾರ, ದುಷ್ಟ ಅಘೋಚರ ಶಕ್ತಿಗಳು ಆಡಿಸುವ ಆಟದಿಂದ ಮನುಷ್ಯನು ತಾನು ಬಯಸಿದಂತೆ ಸುಖ ಜೀವನವನನ್ನು ಸಾಗಿಸಲು ಸಿದ್ಧಿಸಾಧಕರ ಸಹಕಾರ, ನಿಮ್ಮ ಜೀವನಕ್ಕೆ ಪ್ರಮುಖವಾದದ್ದು, ಅಂತಹ ಸಿದ್ಧಿಸಾಧಕರಾದ
"ಶ್ರೀ ಮಂಜುನಾಥ ಗುರೂಜಿ"
ಇವರಿಂದ ಮಾತ್ರ ಈ ಸಾಧನೆ ಸಾಧ್ಯ

ಇವರು ಕೇರಳ ಬಂಗಾಳಿ, ಅಘೋರಿ, ನಾಗಸಾಧುಗಳ ಋಷಿಮುನಿಗಳ ಬಳಿ ಪ್ರಾಚೀನ ತಾಳೆಗ್ರಂಥದ ರಹಸ್ಯ, ಮಂತ್ರ-ತಂತ್ರ ದೇವಿಶಕ್ತಿ ಕಠೋರ ಸಾಧನೆಯಿಂದ ಯಾಗ ಯಜ್ಞಗಳ ಮೂಲಕ ಸಿದ್ಧಿ ಮಾಡಿಕೊಂಡಿರುತ್ತಾರೆ.

ವಿದ್ಯೆ, ಉದ್ಯೋಗ, ಶತ್ರುಭಯ, ಪ್ರೇಮವಿಚಾರ, ವಿವಾಹ, ಸಂತಾನ, ಮಾಟಮಂತ್ರ, ಶತ್ರುನಾಶ, ಲೈಂಗಿಕ, ಸಂಮ್ಮೋಹಿನಿ, ಜಾಗದ ವಿಚಾರ, ಬಿಸಿನೆಸ್, ವಿದೇಶ ಪ್ರಯಾಣ, ಸಾಲಭಾದೆ, ಕೋರ್ಟ್‌ಕೇಸ್, ಗುಪ್ತಸಮಸ್ಯೆ, ಇನ್ನಿತರ ಯಾವುದೇ ಕಠಿಣ ಸಮಸ್ಯೆಯಿರಲಿ ಸಿದ್ಧಿಸಾಧನೆಯಿಂದ ಶಾಸ್ತ್ರೀಯ ಪದ್ಧತಿಯಲ್ಲಿ ಕೆಲವೇ ಗಂಟೆಗಳಲ್ಲಿ ಪರಿಹಾರ ಮಾಡುತ್ತಾರೆ.

ವಿಶೇಷ ಸೂಚನೆ: ಜನವಶೀಕರಣ, ಲಕ್ಷ್ಮೀವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣಗಳಿಗೆ ಕೆಲವೇ ಗಂಟೆಗಳಲ್ಲಿ ಪರಿಹಾರ.

ನಮ್ಮನ್ನು ಭೇಟಿಯಾಗುವ ಅವಶ್ಯಕತೆಯಿಲ್ಲ ಒಮ್ಮೆ ಕರೆಮಾಡಿ ನಿಮ್ಮೆಲ್ಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಪಡೆಯಿರಿ.

ನಮ್ಮಲ್ಲಿ ಕೇಳುವ ನಿಮ್ಮೆಲ್ಲ ವಿಷಯಗಳನ್ನು ಗುಪ್ತವಾಗಿಡಲಾಗುವುದು.

ನಿಮ್ಮ ಸಮಸ್ಯೆಗಳನ್ನು ಯಾರಿಂದಲೂ ಬಗೆಹರಿಸಲು ಸಾಧ್ಯವಿಲ್ಲ, ನಮ್ಮಿಂದ ಮಾತ್ರಸಾಧ್ಯ ಪರಿಹಾರ ಬೇಕಿದ್ದಲ್ಲಿ ಒಮ್ಮೆ ಕರೆಮಾಡಿ

ಶ್ರೀ ಮಂಜುನಾಥ ಗುರೂಜಿ
9886999747